# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 258/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ಜ್ಯೋತಿ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಚೆನ್ನವೀರ ರಾಧ್ಯ | | **03.10.2024** |
| **ವಯಸ್ಸು** | ಃ **42** ವರ್ಷ | | |
| **ವೃತ್ತಿ** | ಃ ಅಂಗನವಾಡಿ ಕಾರ್ಯಕರ್ತೆ | **ಪ್ರಾ.ಸಾ.** | ಃ **08** |
| **ವಾಸಸ್ಥಳ** | ಃ ಬಳೆಹತ್ತಿಗುಪ್ಪೆ | **ಚಾ.ಸಾ.** | ಃ **16** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಕಳೆದ *8* ವರ್ಷಗಳಿಂದ ಬಳೆಹತ್ತಿಗುಪ್ಪೆ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಮೃತ ಮಮತಾ ಇವರು ಕೆರೆತೊಣ್ಣುರು ಗ್ರಾಮದ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದರು. ಮೃತ ಮಮತಾ ಮತ್ತು ನಾನು ಆಗಾಗ ಮೀಟಿಂಗ್ ಗಳಲ್ಲಿ ಸೇರುತ್ತಿದ್ದರಿಂದ ನನಗೆ ಅವರ ಪರಿಚಯ ಇತ್ತು. ಮಮತಾಳು ನನ್ನೊಂದಿಗೆ ಮೊಹನ್ ಎನ್ನುವಾತನು ನನ್ನ ತಮ್ಮನಾಗಿದ್ದು ಗೋವಾದಲ್ಲಿ ಬೇಕರಿ ಇಟ್ಟುಕೊಂಡಿದ್ದು ಅಲ್ಲಿ ನಷ್ಟವಾಗಿದ್ದರಿಂದ ಈಗ ಮೈಸೂರಿನ ಸಿದ್ದಲಿಂಗಪುರದಲ್ಲಿ ಬೇಕರಿ ಇಟ್ಟುಕೊಂಡಿರುವುದಾಗಿ ಹೇಳಿದ್ದರು. ಒಂದು ಬಾರಿ ಮೋಹನ್ ಮತ್ತು ಮಮತಾ ಇಬ್ಬರು ನಮ್ಮ ಮನೆಗೆ ಬಂದಿದ್ದರು. ನಂತರ ಮೋಹನ್ ನು ಒಂದು ಬಾರಿ ನನ್ನ ಮೊಬೈಲ್ ಗೆ ಕರೆ ಬಾರಿ ನಾನು ಮಮತಾಳನ್ನು ಪ್ರೀತಿ ಮಾಡಿ ಮದುವೆಯಾಗಿರುವುದಾಗಿ ಹೇಳಿದ್ದರು. ಆದರೆ ಆ ಬಗ್ಗೆ ನಾನು ಮಮತಾಳನ್ನು ವಿಚಾರಿಸಿರಲಿಲ್ಲ. ಕರೆ ಮಾಡಿ ಮೊಹನ್ ನು ಮಮತಾಳ ಕತ್ತಿನಲ್ಲಿರುವ ಕರಿಮಣಿ ಸರ ನಾನು ಕಟ್ಟಿರುವುದು ಎಂದು ಹೇಳಿದ್ದ.

*2.* *2023*ರ ಬೇಸಿಗೆ ರಜೆ ಕಾಲಕ್ಕೆ ನಾನು ನನ್ನ ಅಕ್ಕನ ಮನೆಗೆ ಹೋಗಿದ್ದಾಗ ದಿಃ*24.05.2023* ರಂದು ನಾನು ಮಮತಾಳಿಗೆ ಕರೆ ಮಾಡಿದಾಗ ಮಮತಾ ತಾನು ಸಿದ್ದಲಿಂಗಪುರದ ಮೋಹನ್ ಗೆ ಇಟ್ಟುಕೊಟ್ಟಿದ್ದ ತನ್ನ ಬೇಕರಿ ಇದುದ್ದಾಗಿ ಹೇಳಿದ್ದಳು ಮತ್ತು ಮಗನನ್ನು ಮೈಸೂರಿನ ಬಿ.ಜಿ.ಎಸ್ ಶಾಲೆಗೆ ಸೇರಿಸಿರುವುದಾಗಿ ಹೇಳಿದ್ದಳು ಆಗ ಮಮತಾ ನನ್ನನ್ನು ಊರಿಗೆ ಯಾವಾಗ ಬರುತ್ತೀಯಾ ಎಂದು ಕೇಳಿದ್ದಳು ಅಷ್ಟರಲ್ಲಿ ಕರೆ ಮುಕ್ತಾಯಗೊಳಿಸಿದ್ದಳು. ಅದೇ ದಿನ ಸಂಜೆ *7* ಗಂಟೆಗೆ ನನ್ನ ಸಹದ್ಯೋಗಿ ರಾಧಾ ಎನ್ನುವವರು ಕರೆ ಮಾಡಿ ಮಮತಾ ಇವರನ್ನು ಮೋಹನ್ ಕೊಲೆ ಮಾಡಿದ್ದಾನೆ ಎಂದು ಹೇಳಿದ್ದರು. ಹಣದ ವಿಚಾರವಾಗಿ ಮೊಹನ್ ಮಮತಾಳನ್ನು ಕೊಲೆ ಮಾಡಿದ್ದಾಗಿ ಗೊತ್ತಾಗಿತ್ತು. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇ. ದಿಃ*10.07.2023* ರಂದು ನನಗೆ ವಿಚಾರಣೆಗೆ ಬರುವಂತೆ ನೊಟಿಸ್ ಕೊಟ್ಟಿದ್ದರು. ಈಗ ನಾನು ನೋಡುತ್ತಿರುವ ನೋಟಿಸ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸ್ ಅನ್ನು ನಿ.ಪಿ-*17* ಮತ್ತು ಸಹಿಯನ್ನು ನಿ.ಪಿ-*17(ಎ)* ಎಂದು ಗುರುತಿಸಿದೆ. ಈ ದಿನ ಕೋರ್ಟ್ ಮುಂದೆ ಇರುವ ಆರೋಪಿತನೇ ಮಮತಾಳೊಂದಿಗೆ ನಮ್ಮ ಮನೆಗೆ ಬಂದಿದ್ದ ಮೋಹನ್ ಅಲಿಯಾಸ್ ಮನು ಇರುತ್ತಾನೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಎಸ್ ರವರಿಂದಃ-</u>

*3.* ನಾನು ಮತ್ತು ಮೃತ ಮಮತಾ ಅಂಗನವಾಡಿ ಕಾರ್ಯಕರ್ತರಾಗಿದ್ದರಿಂದ ನನಗೆ ಅವರ ಪರಿಚಯ ಇತ್ತು. ಕಳೆದ *8* ವರ್ಷಗಳಿಂದ ನಾನು ಅಂಗನವಾಡಿ ಕಾರ್ಯಕರ್ತಳಾಗಿ ಕೆಲಸ ಮಾಡುತ್ತಿದ್ದೇನೆ. ಮಮತಾ ಎಷ್ಟು ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಮಮತಾ ಕೆರೆತೊಣ್ಣುರು ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರು. ದಿನಾಲೂ ಬೆಳಗ್ಗೆ *9.30* ರಿಂದ *4* ಗಂಟೆವರೆಗೆ ನನ್ನ ಮತ್ತು ಇತರೆ ಎಲ್ಲಾ ಅಂಗನವಾಡಿ ಕಾರ್ಯಕರ್ತರ ಕೆಲಸದ ಅವಧಿ ಇರುತ್ತದೆ. ಮಮತಾ ಇವರು ಅದೇ ಅವಧಿಯಲ್ಲಿ ಕೆಲಸ

ಮಾಡುತ್ತಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ನನ್ನ ಹಾಜರಾತಿ ಪುಸ್ತಕ ಇರುತ್ತದೆ ಎಂದರೆ ನಿಜ. ಮಮತಾ ಇವರೊಂದಿಗೆ ಹೆಲ್ಪರ್ ಎಂದು ಇನ್ನೊಬ್ಬರು ಕೆಲಸ ಮಾಡುತ್ತಿದ್ದರು. ತಿಂಗಳಿಗೆ ಎರಡು ದಿನ ನನಗೆ ಮೀಟಿಂಗ್ ಇರುತ್ತದೆ ಆ ಕಾಲಕ್ಕೆ ಮಮತಾ ಇವರನ್ನು ಭೇಟಿ ಮಾಡುತ್ತಿದ್ದೆ. ಕೊನೆಯದಾಗಿ ಮೇ 2023 ರ ಮೀಟಿಂಗ್ ಕಾಲಕ್ಕೆ ನಾನು ಮಮತಾ ಇವರನ್ನು ಭೇಟಿ ಮಾಡಿದ್ದೆ ಆದರೆ ದಿನಾಂಕ ನೆನಪಿಲ್ಲ. ಬೆಳಗ್ಗೆ 10 ರಿಂದ ಸಂಜೆ 4 ವರೆಗೆ ಆ ಮೀಟಿಂಗ್ ನಡೆದಿತ್ತು. ಮೀಟಿಂಗ್ ನಲ್ಲಿ ಇಲಾಖೆಗೆ ಸಂಬಂದಪಟ್ಟ ವಿಚಾರಗಳನ್ನು ಮಾತನಾಡುತ್ತಿದ್ದರು. ಆದರೆ ವೈಯಕ್ತಿಕ ವಿಚಾರವನ್ನು ಮಾತನಾಡುವುದಿಲ್ಲ. ನನಗೆ ಮಮತಾಳ ಗಂಡ ಅಷ್ಟೊಂದು ಪರಿಚಯ ಇಲ್ಲ. ನನಗೆ ಅವರ ಕುಟಂಬದವರ ಪರಿಚಯ ಇಲ್ಲ. ಈ ದಿನ ರಾಮೇಗೌಡರು ಸಹ ಕೋರ್ಟ್ ಗೆ ಬಂದಿದ್ದಾರೆ ಎಂದರೆ ನಿಜ. ಆ ರಾಮೇಗೌಡರು ಹೇಳಿದಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಪೋಲೀಸರ ಮುಂದೆ ಹೇಳಿಕೆಯನ್ನು ನಾನೇ ಹೇಳಿ ಬರೆಸಿದ್ದೇನೆ. ದಿಃ10.07.2023 ರಂದು ಬಳಿಹತ್ತಿಗುಪ್ಪೆ ಅಂಗನವಾಡಿಯಲ್ಲಿ ನನ್ನ ಹೇಳಿಕೆ ಕೊಟ್ಟಿದ್ದೇನೆ. ನನ್ನ ಹೇಳಿಕೆ ಪಡೆದಿದ್ದ ಪೋಲೀಸರ ಹೆಸರು ಮತ್ತು ಹುದ್ದೆ ಗೊತ್ತಿಲ್ಲ. ಮದ್ಯಾಹ್ನ 1.45 ಕ್ಕೆ ನನ್ನ ಹೇಳಿಕೆ ಪಡೆದಿದ್ದರು. ಅರ್ಧ ಗಂಟೆ ನನ್ನ ಹೇಳಿಕೆ ಪಡೆದಿದ್ದರು. ಹೇಳಿಕೆ ಪಡೆದಿದ್ದ ಸ್ಥಳದ ಕುರಿತು ಹೇಳಿಕೆಯಲ್ಲಿ ನಮೂದು ಇಲ್ಲ. ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಮತ್ತು ರಾಮೇಗೌಡರ ಹೇಳಿಕೆಯಂತೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಮತಾ ಮತ್ತು ರಾಮೇಗೌಡರ ನಡುವೆ ಸಂಬಂದ ಯಾವುದೇ ರೀತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ನಡುವೆ ಕಲಹ ಇತ್ತು ಎಂದರೆ ಗೊತ್ತಿಲ್ಲ. ಮಮತಾಳ ವೈಯಕ್ತಿಕ ವಿಚಾರ ನನಗೆ ಗೊತ್ತಿಲ್ಲ. ಆರೋಪಿತನನ್ನು ಈ ಮುಂಚೆ ಎಲ್ಲಿಯೂ ನೋಡಿಲ್ಲ ಎಂದರೆ ಸರಿಯಲ್ಲ. ಕೊಲೆಯಾಗುವ 2-3 ತಿಂಗಳ ಹಿಂದೆ ಆರೋಪಿತ ನಮ್ಮ ಮನೆ ಬಳಿ ಬಂದಿದ್ದ. ಆ ಕಾಲಕ್ಕೆ ಆರೋಪಿತ ಮತ್ತು ಮಮತಾ ನಮ್ಮ ಮನೆ ಬಳಿ ಬಂದಿದ್ದರು ಆದರೆ ಮನೆ ಒಳಗೆ ಬಂದಿರಲಿಲ್ಲ. ಆ ಕಾಲಕ್ಕೆ ನನಗೆ

ಮಮತಾ ಕೊಡಬೇಕಾದ ಹಣ ಕೊಡಲು ಬಂದಿದ್ದರು. ನನ್ನ ಮನೆ ಬಳಿ ಬಂದ ಬಗ್ಗೆ ಸಹ ಹೇಳಿಕೆಯಲ್ಲಿ ಹೇಳಿದ್ದೇನೆ. ನನ್ನ ಮತ್ತು ಆರೋಪಿತನ ನಡುವೆ ಯಾವುದೇ ವ್ಯವಹಾರ ಅಥವಾ ಮಾತುಕತೆ ಇರಲಿಲ್ಲ ಒಂದು ಬಾರಿ ಮಾತ್ರ ಆರೋಪಿತ ಫೋನ್ ಮಾಡಿದ್ದ. ಕೊಲೆಯಾಗುವ *1-2* ತಿಂಗಳ ಹಿಂದೆ ಆರೋಪಿತ ಫೋನ್ ಮಾಡಿದ್ದ. ಆದರೆ ಆರೋಪಿತನ ಫೋನ್ ನಂಬರ್ ನೆನಪಿಲ್ಲ. ನನ್ನ *9008468309* ಸಂಖ್ಯೆಗೆ ಫೋನ್ ಮಾಡಿದ್ದ. ನಾನು ಪೋಲೀಸರಿಗೆ ಕಾಲ್ ಲಿಸ್ಟ್ ಅನ್ನು ಕೊಟ್ಟಿಲ್ಲ. ಪೋಲೀಸರು ಪಡೆದಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ನಾನು ಆರೋಪಿತನಿಗೆ ನನ್ನ ಫೋನ್ ಸಂಖ್ಯೆ ಕೊಟ್ಟಿಲ್ಲ. ಆರೋಪಿತ ನನಗೆ ಫೋನ್ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿತನ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿತ ನನಗೆ ಫೊನ್ ಮಾಡಿಲ್ಲ ಮತ್ತು ಮಮತಾಳನ್ನು ಮದುವೆಯಾದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿಕೆಯಲ್ಲಿ ಹೇಳಿರುವ ಎಲ್ಲಾ ವಿಷಯ ಸುಳ್ಳಿದೆ ಎಂದರೆ ಸರಿಯಲ್ಲ. ಆರೋಪಿತನಿಗೂ ಮಮತಾಳ ಸಾವಿಗೂ ಸಂಬಂದ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**